# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 628/2000

ಪಿರ್ಯಾದುದಾರರು : ತಾವರೆಕೆರೆ ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿಗಳು : ಲಕ್ಷ್ಮಮ್ಮ ಮತ್ತು ಇತರರು**

| | |
|---|---|
| ಹೆಸರು | **ಗೋವಿಂದರಾಜು** |
| ತಂದೆಯ ಹೆಸರು | **ಗಂಗನರಸಯ್ಯ** |
| ವಯಸ್ಸು | **39** |
| ಉದ್ಯೋಗ | **ಹೆಚ್.ಸಿ** |
| ವಿಳಾಸ | **ದೊಡ್ಡಬಳ್ಳಾಪುರ** |

ದಿನಾಂಕ: **19-12-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಆರೋಪಿ ತಲೆ ಮರೆಸಿಕೊಂಡಿರುವ ಕಾರಣ ಸಾಕ್ಷಿಯ ವಿಚಾರಣೆಯನ್ನು 299 ಸಿ.ಆರ್.ಪಿ.ಸಿ . ಅಡಿಯಲ್ಲಿ ತೆಗೆದುಕೊಳ್ಳಲಾಯಿತು :-**

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು 2017 ರಿಂದ 2024ರ ಸೆಪ್ಟಂಬರ್ ತಿಂಗಳಿನವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕ:01-03-2021 ರಂದು ನನಗೆ ಠಾಣೆಯಲ್ಲಿ ಈ ಪ್ರಕರಣದಲ್ಲಿ ಉದ್ಘೋಷಣೆಯನ್ನು ಮಾಡಲು ನೇಮಕ ಮಾಡಿದ್ದರು. ನಾನು ಕೋಲಾರ ಜಿಲ್ಲೆಯ ಶ್ರೀನಿವಾಸ್ ಪುರ ತಾಲ್ಲೂಕಿನ ಗೌಡಹಳ್ಳಿ ಗ್ರಾಮಕ್ಕೆ ಹೋಗಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಹತ್ತಿರ ರಾಮಕೃಷ್ಣ ಮತ್ತು ರಾಮಚಂದ್ರ ಎಂಬ ಇಬ್ಬರು ಪಂಚರನ್ನು ಬರಮಾಡಿಕೊಂಡು ಆರೋಪಿಗಳ ಮೇಲೆ ಮಾನ್ಯ ನ್ಯಾಯಾಲಯವು ಹೊರಡಿಸಿರುವ ಉದ್ಘೋಷಣೆಯ ಬಗ್ಗೆ ಅವರಿಗೆ ತಿಳಿಸಿ, ಅವರನ್ನು ಕೇಳಿದಾಗ

ಆರೋಪಿಗಳು  ಆ ಗ್ರಾಮದವರು ಆಗಿರುವುದಿಲ್ಲ ಎಂದು  ಹೇಳಿದರು.  ನಂತರ ಆ ಗ್ರಾಮದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಟಾಂಟಾಂ ಮಾಡಿ ಉದ್ಘೋಷಣೆ ಯಾನ್ನು ಮಾಡಿರುತ್ತೇನೆ.  ಸದರಿ ಸ್ಥಳ ಮಹಜರ್  ನ್ನು ಮಧ್ಯಾಹ್ನ 2 ರಿಂದ 2.30 ರವರೆಗೆ ಮಾಡಲಾಗಿರುತ್ತದೆ.  ಈಗ ಸಾಕ್ಷಿಗೆ  ಉದ್ಘೋಷಣಾ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ  ಇರುವ ತನ್ನ ಸಗಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ.  ಪಂಚನಾಮೆಯನ್ನು ನಿಪಿ-1  ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಓ. ಹೇ. ಕೇ. ಸ. ಇ. ಎ.  ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**